5. ಗಮನ ಸೆಳೆಯುವ ಸೂಚನೆಗಳು

ವಿಷಯ: ಅ) ಗೌರಿಬಿದನೂರು ತಾಲ್ಲೂಕು ಸಿರಗುಪ್ಪ ಸಕ್ಕರೆ ಕಾರ್ಖಾನೆಯವರು ಕಬ್ಬು ಬೆಳೆಗಾರರಿಗೆ ಬಾಕಿ ಹಣವನ್ನು ನೀಡದಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆ.

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ(ಗೌರಿಬಿದನೂರು): ಮಾನ್ಯ ಅಧ್ಯಕ್ಷರೆ, ಗೌರಿಬಿದನೂರು ತಾಲ್ಲೂಕು ಸಿರಗುಪ್ಪ ಸಕ್ಕರೆ ಕಾರ್ಖಾನೆಯವರು ಕಬ್ಬು ಬೆಳೆಗಾರರಿಗೆ ನೀಡಬೇಕಾದ ಬಾಕಿ ಹಣವನ್ನು ನೀಡದಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ.ಕೃಷ್ಣಪ್ಪ(ಸಕ್ಕರೆ, ಪಶುಸಂಗೋಪನಾ ಸಚಿವರು): ಗೌರಿಬಿದನೂರು ತಾಲ್ಲೂಕಿನ ಸಿರಗುಪ್ಪ ಸಕ್ಕರೆ ಕಾರ್ಖಾನೆಯು ಒಂದು ಖಾಸಗಿ ವಲಯದ ಕಾರ್ಖಾನೆಯಾಗಿರುತ್ತದೆ. ಕಾರ್ಖಾನೆಯು ಕಳೆದ ಎರಡು ವರ್ಷಗಳಿಂದ ಕಬ್ಬು ಬೆಳೆಗಾರರಿಗೆ ಕೊಡಬೇಕಾದ ಬಾಕಿ ಹಣ ಪಾವತಿಸುವಲ್ಲಿ ವಿಳಂಬ ಮಾಡುತ್ತಿರುವುದನ್ನು ಗಮನಿಸಿ ಈ ಸಮಸ್ಯೆಗೆ ಸಾಧ್ಯವಿರುವ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಆಡಳಿತ ಮಂಡಳಿ ಮತ್ತು ಕಬ್ಬು ಬೆಳೆಗಾರರೊಂದಿಗೆ ಮಾನ್ಯ ಸಕ್ಕರೆ ಸಚಿವರು, ಮಾನ್ಯ ಗಣಿ ಸಚಿವರು ಮತ್ತು ಕಾರ್ಯದರ್ಶಿಗಳ ಮಟ್ಟದಲ್ಲಿ ಸಾಕಷ್ಟು ಸಭೆಗಳನ್ನು ನಡೆಸಿ ಚರ್ಚಿಸಲಾಗಿದೆ. ಅಂತಹ ಒಂದು ಸಭೆಯನ್ನು ದಿ:25-6-2001ರಂದು ಕೂಡಾ ನಡೆಸಲಾಗಿದೆ. ಕಾರ್ಖಾನೆಯು 1999-2000ನೇ ಸಾಲಿನ ಬಾಕಿ ರೂ.137.00 ಲಕ್ಷ ಹಾಗೂ 2000-01ನೇ ಸಾಲಿನ ಬಾಕಿ ರೂ.319.00 ಲಕ್ಷ ಹೀಗೆ ಒಟ್ಟು ರೂ.456.00 ಲಕ್ಷ ಬಾಕಿಯನ್ನು ಕಬ್ಬು ಸರಬರಾಜುದಾರರಿಗೆ ಕೊಡಬೇಕಿದೆ. ಮೇಲೆ ಹೇಳಿದ ಕಬ್ಬಿನ ಬಾಕಿ ಅಲ್ಲದೇ ಕಾರ್ಖಾನೆಯು ಸಿಬ್ಬಂದಿಯ ಸಂಬಳ ಹಾಗೂ ಪಿ.ಎಫ್. ರೂಪದಲ್ಲಿ ಸುಮಾರು ರೂ.33.00 ಲಕ್ಷ ಪಾವತಿಸಬೇಕಾಗಿದೆ.

ಕಾರ್ಖಾನೆಯಲ್ಲಿ ಹಾಲಿ ರೂ.166.79 ಲಕ್ಷ ಮೌಲ್ಯದ ಸಕ್ಕರೆ, ರೂ.35.49 ಲಕ್ಷ ಮೌಲ್ಯದ ಕಾಕಂಬಿ ಮತ್ತು ರೂ.16.00 ಲಕ್ಷ ಮೌಲ್ಯದ ಕಬ್ಬಿನ ಸಿಪ್ಪೆಯ ದಾಸ್ತಾನಿದ್ದು, ಇವುಗಳ ಕ್ರೋಢೀಕೃತ ಮೊತ್ತ ಸುಮಾರು ರೂ.218.28 ಲಕ್ಷಗಳಷ್ಟಾಗುತ್ತದೆ. ಈ ದಾಸ್ತಾನಿನ ಅಡಮಾನ ಮೇಲೆ ಕಾರ್ಖಾನೆಯು ರೂ.122.00 ಲಕ್ಷ ಈಗಾಗಲೇ ಸಾಲ ಪಡೆದಿದ್ದು, ಇದು ಕಳೆದು ಕಾರ್ಖಾನೆಗೆ ಉಳಿಯಬಹುದಾದ ಮೊತ್ತ ಕೇವಲ ರೂ.96.28 ಲಕ್ಷ ಮಾತ್ರ. ಈಗಾಗಲೇ ಹೇಳಿದಂತೆ ಕಾರ್ಖಾನೆಯ ಸಿಬ್ಬಂದಿಗೆ ಕೊಡಬೇಕಾದ ರೂ.33.00 ಲಕ್ಷ ಮೊತ್ತವನ್ನು ಕಳೆದರೆ ಉಳಿಕೆ ಕೇವಲ ರೂ.63.20 ಲಕ್ಷ. ಕಬ್ಬಿನ ಬೆಲೆ ಬಾಕಿ ಸುಮಾರು ರೂ.456.00 ಲಕ್ಷ. ಹೀಗಾಗಿ ಕಬ್ಬಿನ ಬೆಲೆ ಬಾಕಿ

ತೀರುವಳಿಗೆ ಈ ಮೊತ್ತ ಸಾಕಾಗುವುದಿಲ್ಲ. ಸಮಸ್ಯೆಗಳಿಗೆ ಸಾಧ್ಯವಿದ್ದ ಪರಿಹಾರವನ್ನು ಕಂಡುಕೊಳ್ಳುವ ಬಗ್ಗೆ ವಿಚಾರ ಮುಂದುವರೆದಿದೆ.

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ: ಮಾನ್ಯ ಸಭಾಧ್ಯಕ್ಷರೆ, ಕಳೆದ ಸೀಜನ್‌ನಲ್ಲಿ ಸ್ಟಾಕ್ ಮಾಡಿದಾಗ 25,000 ಮೂಟೆ ಸ್ಟಾಕ್ ಇತ್ತು, ಹಿಂದಿನ ಸೀಜನ್‌ನಲ್ಲಿ 60,000 ಮೂಟೆ ಹೀಗೆ ಒಟ್ಟು 85,000 ಮೂಟೆ ಸಕ್ಕರೆ ದಾಸ್ತಾನು ಇತ್ತು. ಅದು ಒಟ್ಟು ಎಂಟೂವರೆ ಕೋಟಿ ರೂಪಾಯಿಗಳ ಬೆಲೆ ಬಾಳತಕ್ಕದ್ದು. ಅದರಲ್ಲಿ ಮೂರು ಕೋಟಿ ರೂಪಾಯಿಗಳನ್ನು ರೈತರು ಕೊಟ್ಟಿದ್ದಾರೆ. ಹಿಂದೆ ಇದ್ದ ಎಲ್ಲಾ ಸ್ಟಾಕ್‌ನ್ನು, ಕೇಂದ್ರ ಸರ್ಕಾರದ ಕೇನ್ ಕಂಟ್ರೋಲ್ ಅನುಮತಿಯಿಲ್ಲದೆ ಒಂದೇ ವಾರದಲ್ಲಿ ಏಕಾಏಕಿಯಾಗಿ ಆಡಳಿತ ಮಂಡಳಿಯವರು ಲಿಫ್ಟ್ ಮಾಡಿದ್ದಾರೆ. ಆದ್ದರಿಂದ ಇದನ್ನು ನಿಲ್ಲಿಸಬೇಕು. ಇಲ್ಲಿ ಕೇವಲ ಹದಿಮೂರು ಸಾವಿರ ಮೂಟೆ ಸ್ಟಾಕ್ ಇದೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಅವರಿಗೆ ಅವಕಾಶ ಕೊಟ್ಟರೆ ರೈತರಿಗೆ ಬಹಳಷ್ಟು ಕಡಿಮೆ ಹಣ ಬರುತ್ತದೆ. ಆದ್ದರಿಂದ ಸೆಂಟ್ರಲ್ ಕೇನ್ ಕಂಟ್ರೋಲ್ ಆರ್ಡರ್ ಪ್ರಕಾರ ಅದನ್ನು ಈ ಕಾರ್ಖಾನೆಗೆ ಎನ್‌ಫೋರ್ಸ್ ಮಾಡಿ ಇರತಕ್ಕಂಥ ಎಲ್ಲಾ ಶುಗರ್ ಸ್ಟಾಕ್‌ನ್ನು ತೆಗೆದುಕೊಂಡರೆ ಸಂಪೂರ್ಣವಾಗಿ ಇದು ಎರಡೂಕಾಲು ಕೋಟಿ ರೂ. ಏನಿದೆ ಅದು ರೈತರಿಗೆ ನೇರವಾಗಿ ಮುಟ್ಟುತ್ತದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಆಡಳಿತ ಮಂಡಳಿಯವರಿಗೆ ಅವಕಾಶ ಕೊಟ್ಟರೆ ಬಹಳ ಕಡಿಮೆ ಹಣ ಸಿಗುತ್ತದೆ. ಈ ಕಾರಣದಿಂದ ರೈತರಿಗೆ ಹೆಚ್ಚಿಗೆ ಹಣ ಪಾವತಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈಗಾಗಲೇ ನಿವರಣೆ ಕೊಟ್ಟ ಪ್ರಕಾರ ಸೆಂಟ್ರಲ್ ಕೇನ್ ಕಂಟ್ರೋಲ್ ಆರ್ಡರ್ ಏನಿದೆ ಅದನ್ನು ಈ ಕಾರ್ಖಾನೆಗೆ ಎನ್‌ಫೋರ್ಸ್ ಮಾಡಿದರೆ ರೈತರಿಗೆ ಸ್ವಲ್ಪ ಮಟ್ಟಿಗಾದರೂ ಹಣ ಬರತಕ್ಕಂಥ ಕೆಲಸವಾಗುತ್ತದೆ ಎಂದು ನಾನು ಸಂಬಂಧಪಟ್ಟ ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಕೃಷ್ಣಪ್ಪ: ನಾವು ಈಗಾಗಲೇ ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಈ ಬಗ್ಗೆ ರೈತರಿಗೆ ಆಗಿರತಕ್ಕಂಥ ತೊಂದರೆ ಮತ್ತು ಅವರ ಕಷ್ಟದ ಬಗ್ಗೆ ಹೇಳಿದ್ದೇವೆ. ಇವತ್ತು ಬೇರೆ ಕಡೆ ಕಬ್ಬು ಬೆಳೆಯುವುದಕ್ಕೂ, ನಮ್ಮ ಕಡೆ ದೊಡ್ಡಬಳ್ಳಾಪುರ, ಗೌರಿಬಿದನೂರು ಈ ಮೂರು-ನಾಲ್ಕು ತಾಲ್ಲೂಕುಗಳಲ್ಲಿ ಬೆಳೆಯುವುದಕ್ಕೂ ವ್ಯತ್ಯಾಸ ಇದೆ. ಮುನ್ನೂರು-ನಾಲ್ಕುನೂರು ಅಡಿಯಿಂದ ಬೋರ್‌ವೆಲ್‌ಗಳಿಂದ ನೀರು ತೆಗೆದು ಇಲ್ಲಿ ರೈತರು ಕಬ್ಬು ಬೆಳೆದಿದ್ದಾರೆ. ಎರಡು-ಮೂರು ವರ್ಷಗಳಿಂದ ಕಬ್ಬು ಬೆಳೆಗಾರರಿಗೆ ದುಡ್ಡು ಕೊಡುವುದಕ್ಕೆ ಆಗಿಲ್ಲ. ಇವತ್ತು ನಾವು ಶಾಸಕರು ಅಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ. ಜನರು ನಮಗೆ ಅಷ್ಟೊಂದು ತೊಂದರೆ ಕೊಡುತ್ತಾರೆ. ಇವತ್ತು ರೈತರು ಮಗಳ ಮದುವೆ ಮಾಡಬೇಕು,

ಎಲೆಕ್ಟ್ರಿಸಿಟಿ ಬಿಲ್ ಕಟ್ಟಬೇಕಾದರೆ ಅವರಿಗೆ ಈ ಹಣದ ಅವಶ್ಯಕತೆ ಇದೆ. ಏನಾದರೂ ಮಾಡಿ ಆ ಹಣವನ್ನು ಕೊಡಿಸಿಕೊಡಿ ಎಂದು ಅವರು ನಮ್ಮನ್ನು ಕೇಳುತ್ತಾರೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಮಂಡ್ಯ ಸಹಕಾರಿ ಸಕ್ಕರೆ ಕಾರ್ಖಾನೆಗೆ ಯಾವರೀತಿ ಮಾಡಿದರೋ ಅದೇರೀತಿ ಇಲ್ಲಿ ಕಾರ್ಖಾನೆಗೂ ಮಾಡದೇ ಹೋದರೆ ರೈತರು ಬಹಳ ಕಷ್ಟ ಅನುಭವಿಸಬೇಕಾಗುತ್ತದೆ. ನಾವು ಶಾಸಕರು ಯಾರೂ ಓಡಾಡುವುದಕ್ಕೆ ಆಗುತ್ತಿಲ್ಲ. ದಯವಿಟ್ಟು ಇದನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಚನ್ನಿಗಪ್ಪ: ಈ ಗೌರಿಬಿದನೂರು ಸಹಕಾರಿ ಸಕ್ಕರೆ ಕಾರ್ಖಾನೆಗೆ ನಾನು ಮತ್ತು ಮಾನ್ಯ ಶಿವಶಂಕರರೆಡ್ಡಿಯವರು ಮೂರು-ನಾಲ್ಕು ಸಾರಿ ಹೋಗಿ ನೋಡಿದ್ದೇವೆ. ರೈತರು ಬಹಳ ಅಧಿಕವಾಗಿ ಕಬ್ಬು ಬೆಳೆದು ಅಲ್ಲಿಗೆ ಸಾಗಿಸಿದರು. ಆದರೆ ಅವರು ಹಣ ಕೊಡಬೇಕಾದರೆ ಆರುತಿಂಗಳು, ಒಂಬತ್ತು ತಿಂಗಳು, ಹನ್ನೆರಡು ತಿಂಗಳು ಎಂದು ಹೇಳಿಬಿಟ್ಟು ಪದೆಪದೇ ಅದನ್ನು ಮುಂದಕ್ಕೆ ಹಾಕಿದರು. ಇವತ್ತು ರೈತರು ಬಡ್ಡಿಸಾಲ ಕೊಡಬೇಕು, ಬ್ಯಾಂಕಿಗೆ ಸಾಲ ಕಟ್ಟಬೇಕು, ಮಕ್ಕಳ ಮದುವೆ ಮಾಡಬೇಕು, ಮಕ್ಕಳನ್ನು ಓದಿಸಬೇಕು ಎಂದರೆ ಅವರು ತಾವು ಬೆಳೆದ ಬೆಳೆಗಳ ಮೇಲೆ ಅವಲಂಬನೆ ಮಾಡುತ್ತಾರೆ. ಮಾನ್ಯ ಸಚಿವರು ಹೆಚ್ಚಿನ ಆಸಕ್ತಿ ವಹಿಸಿ ಅವರನ್ನು ಮತ್ತು ನಮ್ಮನ್ನು ಕರೆಸಿ ಮೀಟಿಂಗ್ ಮಾಡಿದರು. ಮೂರು ತಿಂಗಳಲ್ಲಿ ಹಣ ಕೊಡುತ್ತೇವೆ, ಅಷ್ಟು ಕಾಲಾವಕಾಶ ಕೊಡಿ ಎಂದು ಡಿಸೆಂಬರ್ ತಿಂಗಳಲ್ಲಿ ಒಪ್ಪಿಕೊಂಡು ಹೋದರು. ಮಾರ್ಚ್‌ನಲ್ಲಿ ಕೊಡುತ್ತೇನೆ ಎಂದು ಹೇಳಿದರು. ಮಾರ್ಚ್ ತಿಂಗಳೂ ಆಯಿತು. ಆದರೂ ಇಲ್ಲಿಯವರೆಗೆ ಯಾವುದೇ ಇತ್ಯರ್ಥ ಆಗಿಲ್ಲ. ಇವತ್ತು ರೈತರ ಪಾಡು ಏನಾಗಿದೆ ಎಂದರೆ, ಅವರ ಗೋಳು ಆಕಾಶಕ್ಕೆ ಮುಟ್ಟಿದೆ. ನಾನು ಮಾನ್ಯ ಮಂತ್ರಿಗಳಲ್ಲಿ ಏನಂತಿ ಮಾಡಿಕೊಳ್ಳುವುದು ಏನೆಂದರೆ, ದಯವಿಟ್ಟು ಯಾವುದಾದರೂ ಕಾನೂನನ್ನು ಅಳವಡಿಸಿ ರೈತರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸುವುದರ ಮುಖಾಂತರ ಈ ಮೂರು ನಾಲ್ಕು ತಾಲ್ಲೂಕುಗಳಲ್ಲಿನ ಕಬ್ಬು ಬೆಳಗಾರರು ಏನಿದ್ದಾರೆ ಅವರಿಗೆ ಅದಷ್ಟು ಬೇಗ ಹಣ ಕೊಡಿಸಿಕೊಡಬೇಕು ಮತ್ತು ರಾಜ್ಯದಲ್ಲಿ ಈ ರೀತಿ ಇನ್ನು ಮುಂದೆ ಆಗದ ಹಾಗೆ ಕಾನೂನನ್ನು ಮಾಡಬೇಕೆಂದು ತಮ್ಮ ಮುಖಾಂತರ ನಾನು ಮತ್ತೊಮ್ಮೆ ಮಾನ್ಯ ಸಚಿವರಲ್ಲಿ ಏನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೇ, ಮೊನ್ನೆ ಮೂರು ಜನ ಸದಸ್ಯರು ಮತ್ತು ಆ ಜಿಲ್ಲೆಯ ರೈತರೂ ಕೂಡ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಬಂದು ನನ್ನನ್ನು ಭೇಟಿ ಮಾಡಿದ್ದಾರೆ. ಅವರು ಹೇಳಿದ್ದರಲ್ಲಿ ನೂರಕ್ಕೆ ನೂರು ಸತ್ಯ ಇದೆ. ಅದನ್ನು ಯಾರೂ ಸುಳ್ಳು ಎಂದು ಹೇಳುವ ಹಾಗಿಲ್ಲ.

ಮದುವೆಯಿಂದ ಹಿಡಿದು, ಮುರಿದು ಹೋಗಿರುವ ಮನೆಯನ್ನು ಸರಿ ಮಾಡಿಕೊಳ್ಳುವುದರಿಂದ ಹಿಡಿದು, ಕಿತ್ತುಹೋಗಿರುವ ಗಾಡಿ, ಸತ್ತುಹೋಗಿರುವ ಎತ್ತು ಎಲ್ಲದಕ್ಕೂ ಪಾಪ, ಅವರು ಅದರ ಮೇಲೆ ಅವಲಂಬಿಸಬೇಕಾಗಿದೆ. ಅವರಿಗೆ ಬೇರೆ ಏನು ಹೆಚ್.ಆರ್.ಎ., ಡಿ.ಎ. ಬರುತ್ತದೆಯಾ? ಬೇರೆ ಬಾಡಿಗೆ ಏನಾದರೂ ಬರುತ್ತದೆಯಾ? ಏನೂ ಇಲ್ಲ. ಅವರು ಏನು ಮಾಡಬೇಕಾದರೂ ಇದರ ಲಾಭದಿಂದ, ಈ ದುಡ್ಡಿನಿಂದ ಮಾಡಬೇಕು. ಇದು ಏಷಾದದ ಸ್ಥಿತಿ, ಗಂಭೀರವಾದ ಸ್ಥಿತಿ ಎಂಬ ಅರಿವು ಸರ್ಕಾರಕ್ಕಿದೆ. ಮಾನ್ಯ ಸಭಾಧ್ಯಕ್ಷರೇ, ಅವರನ್ನು ಹಿಡಿದುಕೊಂಡು ಬರುವುದೇ ಕಷ್ಟವಾಗಿದೆ. ಪೋಲೀಸರಿಗೆ ದೂರು ಕೊಟ್ಟು ನಾನ್‌ಬೇಲಬಲ್ ವಾರಂಟ್ ರಿಜಿಸ್ಟರ್ ಮಾಡಿ ಅವರನ್ನು ಕರೆಸಬೇಕು. ಮೀಟಿಂಗ್ ಮಾಡಿ ಪ್ರೊಸೀಡಿಂಗ್ಸ್ ಆಗಿದೆ. ಆದರೆ ತಿರುಗಿ ಅವರು ಕಾಣೆಯಾಗಿದ್ದಾರೆ. ಈಗ ಶುಗರ್ ಕಂಟ್ರೋಲ್ ಆ್ಯಕ್ಟ್‌ನ್ನು ಎಕ್ಸಿಕ್ಯೂಟ್ ಮಾಡಿ ಎಂದು ಮಾನ್ಯ ಶಿವಶಂಕರರೆಡ್ಡಿಯವರು ಸಲಹೆ ಕೊಟ್ಟಿದ್ದಾರೆ. ಈಗ ತಾನೇ ರಾಜ್ಯ ಸರ್ಕಾರಕ್ಕೆ ಅವರು ಸ್ವಲ್ಪ ಅಧಿಕಾರವನ್ನು ಕೊಟ್ಟು ಶುಗರ್ ಕಂಟ್ರೋಲ್ ಆ್ಯಕ್ಟ್‌ನ್ನು ರವಾನೆ ಮಾಡಿದ್ದಾರೆ. ಇದು ನಮ್ಮ ಕೈಗೆ ಸಿಕ್ಕಿದ ಬ್ರಹ್ಮಾಸ್ತ್ರ. ಈ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ರೈತರಿಗೆ ಬರಬೇಕಾದ ಎಲ್ಲಾ ಬಾಕಿಗಳನ್ನು ವಾಪಾಸ್ಸು ತಂದುಕೊಟ್ಟು ಅವರಿಗೆ ನೆಮ್ಮದಿ ತರೋಣವೆಂದು ನಾವು ಪ್ರಯತ್ನ ಪಟ್ಟೆವು. ಸ್ಯಾಂಪಲ್ ಆಗಿ ಈ ಒಂದು ಕಾರ್ಖಾನೆ ಮೇಲೆ ಈ ಬ್ರಹ್ಮಾಸ್ತ್ರವನ್ನು ಬಿಟ್ಟೆವು. ಆದರೆ ಅದರ ಮೇಲೆ ಸುಮಾರು ನ್ಯೂನತೆಗಳನ್ನು ವಕೀಲರುಗಳು ಹಿಡಿದುಬಿಟ್ಟಿದ್ದಾರೆ. ಅದಕ್ಕಾಗಿ ಭಾರತ ಸರ್ಕಾರಕ್ಕೆ ಅದನ್ನು ವಾಪಸ್ಸು ಕೊಡುತ್ತೇವೆ. ಸ್ವಾಮಿ, ಇಂತಿಂಥ ಏಚಾರಗಳಲ್ಲಿ ನೀವು ಪ್ರಸ್ತಾವನೆ ಮಾಡಿಲ್ಲ, ಇದನ್ನು ನೀವು ಮಾಡಲಾರದೇನೆ, ನಿಮ್ಮ ನೋಟಿಫಿಕೇಷನ್‌ನಲ್ಲಿ ನೀವು ಅಳವಡಿಸದಿರುವ ಕಾರಣದಿಂದ ನಾವು ಇದನ್ನು ಜಾರಿ ಮಾಡುವುದಕ್ಕೆ ಕಷ್ಟ ಬಂದಿದೆ. ಅವರು ಹೈಕೋರ್ಟ್ ಮುಂದೆ ಹೋಗಿದ್ದಾರೆ ಎಂದು ಅವರಿಗೆ ನಾವು ಹೇಳುತ್ತೇವೆ. ಮಾನ್ಯ ಶ್ರೀನಿವಾಸಪ್ರಸಾದ್ ಅವರು ನಮ್ಮ ರಾಜ್ಯದವರು. ಅವರ ಜಿಲ್ಲೆಯ ಒಂದು ಕಾರ್ಖಾನೆಯ ಮೇಲೆಯೇ ನಾವು ಈ ಅಸ್ತ್ರವನ್ನು ಜಾರಿ ಮಾಡಿದೆವು. ಡೆಪ್ಯುಟಿ ಕಮೀಷನರ್‌ಗೆ ಅಧಿಕಾರ ಕೊಟ್ಟು ನೋಟಿಫೀಕೇಷನ್ ಮಾಡಿದೆವು. ಸಕ್ಕರೆ ದಾಸ್ತಾನು ಎಷ್ಟು ಇದೆಯೋ ಅದನ್ನು ಮತ್ತು ಅವರ ಪ್ರಾಪರ್ಟಿಯನ್ನು ಸೀಜ್ ಮಾಡಿ, ನೀವೇ ಮಾರಾಟ ಮಾಡಿ ಬಂದ ದುಡ್ಡನ್ನು ಪ್ರಥಮವಾಗಿ ರೈತರಿಗೆ ಕೊಡಿ, ಮಿಕ್ಕಿದ್ದನ್ನು ಆಮೇಲೆ ನೋಡಿಕೊಳ್ಳೋಣ ಎಂದು ಹೇಳಿದೆವು. ಆದರೆ ಇದು ಒಂದು ಚಿಂತಾಜನಕವಾದಂಥ ಏಚಾರವಾಗಿ, ಇವತ್ತು ಕೋರ್ಟಿನಲ್ಲಿ ಅವರು ನಮ್ಮ ಮೇಲೆ ದಾವೆಗಳನ್ನು ಹಾಕಿದ್ದಾರೆ. ಅದಕ್ಕಾಗಿ ನಮಗೆ ಸ್ವಲ್ಪ ಸಮಯ ಕೊಡಿ. ಕರ್ನಾಟಕ ರಾಜ್ಯ ಸರ್ಕಾರ ನಿಮ್ಮ ಪರವಾಗಿ ಇದೆ, ನಿಮ್ಮ ಧ್ವನಿಗೆ ಒತ್ತನ್ನು ಈ ಸರ್ಕಾರ ಕೊಡುತ್ತದೆ. ರೈತರ ಸಂಕಷ್ಟಕ್ಕೆ ನಾವು ಆದ್ಯತೆಯನ್ನು ಕೊಡುತ್ತೇವೆ. ಆದರೆ ಈ ಬಗ್ಗೆ ಸ್ವಲ್ಪ ಕ್ಲಾರಿಫೀಕೇಷನ್ ಭಾರತ ಸರ್ಕಾರದಿಂದ ಬಂದ ತಕ್ಷಣವೇ ಅವರ ಮೇಲೆ ನಾವು ಇದನ್ನು ಪ್ರಯೋಗ

ಮಾಡುವುದಕ್ಕೆ ಸರ್ಕಾರ ಹಿಂದೆ ಹೋಗುವುದಿಲ್ಲ. ಸರ್ಕಾರ ತಮ್ಮ ಜತೆಯಲ್ಲಿ, ರೈತರ ಜತೆಯಲ್ಲೇ ಇದೆ. ಆದರೆ ಇದನ್ನು ಕಾಲಕಾಲಕ್ಕೆ ಹೇಗೆ ಸರಿಮಾಡಬೇಕೆಂದು ನಾವು ಸಮಾಲೋಚನೆಯನ್ನು ಭಾರತ ಸರ್ಕಾರದ ಜೊತೆಗೆ ಮಾಡುತ್ತಿದ್ದೇವೆ. ಈ ಅಧಿವೇಶನ ಮುಗಿದ ಮೇಲೆ ಅಲ್ಲೇ ಕುಳಿತು ಆ ತಿದ್ದುಪಡಿ ಮಾಡಿ ತರುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಮಾನ್ಯ ಸಭಾಧ್ಯಕ್ಷರೇ, ನಾನು ಈ ಮನೆಯ ಗಮನಕ್ಕೆ ತರುವ ಮತ್ತೊಂದು ವಿಚಾರ ಏನೆಂದರೆ ಶುಗರ್ ಕಂಟ್ರೋಲ್ ಆಕ್ಟ್ ಬಂದ ಮೇಲೆ ಅದನ್ನು ಪ್ರಥಮವಾಗಿ ಜಾರಿ ಮಾಡಿದಂಥ ಸರ್ಕಾರ ಕರ್ನಾಟಕ ರಾಜ್ಯ ಸರ್ಕಾರ. ರೈತರ ಗೋಳನ್ನು ದೂರ ಮಾಡಬೇಕು, ಅವರ ಕಣ್ಣೀರನ್ನು ನಿಲ್ಲಿಸಬೇಕೆಂದು ನಮ್ಮ ಸರ್ಕಾರ ಪ್ರಯತ್ನ ಮಾಡಿದೆ. ಆದ್ದರಿಂದ ಎಷ್ಟೋ ಸಾರಿ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಜತೆಗೆ ಈಗ ಕೋಲಾರ ಜಿಲ್ಲೆಗೆ ಸಂಬಂಧಪಟ್ಟಂತೆ ಬೇರೆಬೇರೆ ವಿಚಾರಗಳಲ್ಲಿ ಎಲ್ಲದಕ್ಕೂ ಕೂಡ ಪರಿಹಾರವನ್ನು ಭಾರತ ಸರ್ಕಾರ ಕೊಡಬೇಕಾದ ಕಾರಣ ಇದರ ಬಗ್ಗೆ ಹೆಚ್ಚು ಚಿಂತನೆ ಮಾಡಿ ಅವರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ನಿಮ್ಮ ಜೊತೆಯಲ್ಲಿ ಇದೆ. ಶಿರಗುಪ್ಪ ಸಕ್ಕರೆ ಕಾರ್ಖಾನೆ ಮತ್ತು ಉತ್ತರ ಕರ್ನಾಟಕದಲ್ಲಿನ ಎರಡು ಕಾರ್ಖಾನೆಗಳ ಬಗ್ಗೆ ಮಾನ್ಯ ಎಸ್.ಎಸ್.ಪಾಟೀಲರಿಗೆ ಗೊತ್ತಿದೆ. ಆಮೇಲೆ ಈ ಕಡೆ ಕುಂತನೂರು ಸಕ್ಕರೆ ಕಾರ್ಖಾನೆ ಅವೆಲ್ಲದಕ್ಕೂ ಕೂಡ ಪರಿಹಾರ ಕೊಡುವುದಕ್ಕೆ ಈ ಸರ್ಕಾರ ಪ್ರಯತ್ನ ಮಾಡುತ್ತದೆ. ಮಾನ್ಯ ಪಿ.ಕೃಷ್ಣಪ್ಪನವರು ಒಂದು ಸಲಹೆ ಕೊಟ್ಟು, ಮಾನ್ಯ ಮುಖ್ಯಮಂತ್ರಿಗಳು ಮಂಡ್ಯ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ 40-50ಕೋಟಿ ಔಟ್ ಆಫ್ ಟರ್ನ್ ಅಲಾಟ್‌ಮೆಂಟ್ ಲೋನ್ ಕೊಟ್ಟಿದ್ದಾರೆ, ಇದಕ್ಕೂ ಏನಾದರೂ ಸಹಾಯ ಮಾಡಿ ಎಂದು ಹೇಳಿದರು. ಈ ವಿಚಾರದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಜತೆಯಲ್ಲಿ ಮಾತನಾಡಿದ್ದೇನೆ. ಯಾವ ರೀತಿಯಾಗಿ ಅದಕ್ಕೆ ಸಹಾಯ ಮಾಡಬೇಕು, ಅಂತಹ ಒಂದು ಕಠಿಣ ಪರಿಸ್ಥಿತಿ ಬಂದರೆ ಅವರ ಆಸ್ತಿಯನ್ನು ಮುಟ್ಟುಗೋಲು ಮಾಡಿಕೊಂಡು ಅದನ್ನು ಹರಾಜು ಮಾಡಿ ಅದರಿಂದ ಬರುವ ದುಡ್ಡನ್ನು ರೈತರಿಗೆ ಕೊಡುವ ಒಂದು ಪ್ರಯತ್ನವನ್ನು ಮುಂದಿನ ದಿನಗಳಲ್ಲಿ ಮಾಡಬೇಕಾದ ಅವಶ್ಯಕತೆ ಇದೆ ಎಂಬುದನ್ನು ನಾವು ಮನಗಂಡಿದ್ದೇವೆ ಮತ್ತು ಅದನ್ನು ಮಾಡುವುದಕ್ಕೆ ನಾವು ಅವರ ಜೊತೆಯಲ್ಲಿ ಇದ್ದೇವೆ. ಇದಕ್ಕಿಂತ ಹೆಚ್ಚು ಉತ್ತರ ಕೊಡುವುದಕ್ಕೆ ಅಂತಹ ಸಾಧ್ಯತೆ ಕಾಣುವುದಿಲ್ಲ ಎಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಅಧ್ಯಕ್ಷರು: ಮುಂದಿನ ಗಮನ ಸೆಳೆಯುವ ಸೂಚನೆ ಶ್ರೀ ಎ.ಎಸ್.ಗುರುಸ್ವಾಮಿ ಅವರದ್ದು.